◆ ಸ್ಪರ್ಧೆಯ ಅಂತಿಮ ಸುತ್ತಿನಲ್ಲಿ 'ಓಂ ಮಹಾಪ್ರಾಣ ದೀಪಂ' ಹಾಡುವಾಗ ನಿಮ್ಮ ಮನಸ್ಸಿನಲ್ಲಿ ಏನಿತ್ತು?

ಮನುಷ್ಯತ್ವ, ಆರೋಗ್ಯದ ವಿಚಾರ ಬಂದಾಗ ಮನುಷ್ಯ ಜಾತಿ–ಧರ್ಮವನ್ನು ಲೆಕ್ಕಿಸುವುದಿಲ್ಲ. ಕೆಟ್ಟ ಗಳಿಗೆಯಿಂದಾಗಿ ನಾನು ಹಾಸಿಗೆ ಹಿಡಿದೆ. ನಾನು ಗುಣಮುಖನಾಗಲೆಂದು ಗುಡಿ, ಮಸೀದಿ, ದರ್ಗಾ ಎನ್ನದೆ ಎಲ್ಲೆಡೆಗೂ ನನ್ನನ್ನು ಕರೆದುಕೊಂಡು ಹೋಗಿದ್ದರು. 'ಇಂತಹ ಕಡೆಗೆ ನಿನ್ನ ಮಗನನ್ನು ಕರೆದುಕೊಂಡು ಹೋಗು, ಗುಣಮುಖನಾಗುತ್ತೇನೆ' ಎಂದು ಯಾರಾದರೂ ಹೇಳಿದ ಮರುದಿನವೇ ಅಲ್ಲಿಗೆ ಕರೆದುಕೊಂಡು ಹೋಗುತ್ತಿದ್ದರು. ಹಾಗೆ ಹೋದ ಕಡೆಯಲ್ಲೆಲ್ಲ ನಾನು ಮುಸ್ಲಿಂ ಧರ್ಮದವನೆಂದು ಯಾರೂ ಭೇದಭಾವ ಮಾಡಲಿಲ್ಲ. ಆ ವಿಚಾರ ನನ್ನ ಮನದಲ್ಲಿ ಆಳವಾಗಿ ಬೇರೂರಿತ್ತು.

'ಓಂ ಮಹಾಪ್ರಾಣ ದೀಪಂ' ಹಾಡನ್ನು ಫಿನಾಲೆಯಲ್ಲಿ ಹಾಡಬೇಕು ಎಂದುಕೊಂಡಿರಲಿಲ್ಲ. ಪ್ರೊಡಕ್ಷನ್ ತಂಡದವರು ಇದೇ ಹಾಡು ಹಾಡಬೇಕೆಂದರು. ಎಲ್ಲ ಧರ್ಮದ ಮೇಲೆ ನಂಬಿಕೆ ಇರುವುದರಿಂದ ಆ ಹಾಡನ್ನು ಹಾಡಲು ನಿರ್ಧರಿಸಿದೆ. ಆ ಹಾಡಿನ ಸಾಲುಗಳು ಸಂಸ್ಕೃತದಲ್ಲಿದ್ದವು. ಅದು ನನಗೆ ಅರ್ಥವಾಗದು. ಆದರೆ, ಆ ಹಾಡನ್ನು ಯಾವ ಸ್ಥಿತಿಯಲ್ಲಿ ಹಾಡಲಾಗಿದೆ ಅನ್ನೋದರ ಹಿನ್ನೆಲೆ ಅರಿತೆ. ಹಾಡಿನ ಸಾಲುಗಳಿಗೆ ಅರ್ಥ ಗೊತ್ತಿರದಿದ್ದರೂ ಹಾಡುವಾಗ ಭಕ್ತಿಭಾವ ಲೋಕದಲ್ಲಿ ಕಳೆದೋಗಿದ್ದೆ. ಜನರಿಗೂ ಅದು ತುಂಬಾ ಇಷ್ಟವಾಯಿತು. ಯಾವಾಗಲೂ ಕೂತು ಹಾಡುವ ನನ್ನನ್ನು, ಜನರ ಅವತ್ತಿನ ಪ್ರತಿಸ್ಪಂದನವು ಎದ್ದುನಿಲ್ಲುವಂತೆ ಮಾಡಿತು.




ಎಲ್ಲ ರೀತಿಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದೆ. 2011ರಲ್ಲಿ ಆದ ಅಪಘಾತದಿಂದಾಗಿ ಹಾಸಿಗೆ ಹಿಡಿಯಬೇಕಾಯಿತು. ಯಾಕ್ ಹೀಗಾಯ್ತು ಅಂತ ನನ್ನ ಮೇಲೆಯೇ ಸಿಕ್ಕಾಪಟ್ಟೆ ಕೋಪ ಬರುತ್ತಿತ್ತು. ಪೊಲೀಸ್ ಆಗಬೇಕೆಂಬ ಆಸೆ ಕಮರಿತು. ಕುಗ್ಗಿಹೋಗಿದ್ದೆ. ಆಗ ನೆರವಿಗೆ ಬಂದವರು ಮುಕ್ತಾ ಎಂಬ ಅಕ್ಕ. 'ನೀನು ಚೆನ್ನಾಗಿ ಹಾಡುತ್ತೀಯ. ಕಷ್ಟಗಳಿಂದ ಹೊರಬರಲು ಸಂಗೀತವೇ ನಿನಗಿರುವ ಮಾರ್ಗ. ಅಭ್ಯಾಸ ಮಾಡು' ಎಂದವರು ಪ್ರೇರೇಪಿಸಿದರು. ಗುರುಗಳಾದ ಕೋಮರ್ ಅವರ ಬಳಿ ಸಂಗೀತ ಕಲಿತೆ. ಜಗದೀಶ್ ಮಡಿವಾಳ ಅನ್ನೋರ ಬಳಿ ಈಗ ಸಂಗೀತ ಕಲಿಯುತ್ತಿದ್ದೇನೆ. ಹಿಂದೂಸ್ತಾನಿಯಲ್ಲಿ ಜೂನಿಯರ್ ಕೋರ್ಸ್ ಆಗಿದೆ. ಸೀನಿಯರ್ ಮಾಡಬೇಕು.



◆ ಗಾಯಕನಾಗದಿದ್ದರೆ ಖಾಸಿಂ ಎಲ್ಲಿರುತ್ತಿದ್ದರು?

ಮನೆಯಲ್ಲೇ ಇರುತ್ತಿದ್ದೆ, ಅಪ್ಪ–ಅಮ್ಮನಿಗೆ ಹೊರೆಯಾಗಿ. ಗಾಯಕನಾಗಿದ್ದರಿಂದ ಚಿಕ್ಕಪುಟ್ಟ ಸ್ಪರ್ಧೆಗಳು, ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಅಲ್ಪಸ್ವಲ್ಪ ಸಂಪಾದನೆ ಮಾಡಿ ಜೀವನ ಸಾಗಿಸುತ್ತಿದ್ದೆ. ಅಲ್ಲಿ ಸಿಗುತ್ತಿದ್ದ 2–3 ಸಾವಿರ ರೂಪಾಯಿಗೆ ತೃಪ್ತಿ ಪಡುತ್ತಿದ್ದೆ.

◆ ಎಲ್ಲರಂತೆ ಓಡಾಡುತ್ತಿದ್ದ, ಕೂರುತ್ತಿದ್ದ ಖಾಸಿಂಗೆ ಆಗಿದ್ದಾದರೂ ಏನು?

ಧಾರವಾಡದಲ್ಲಿ ಪಿಯುಸಿ ಓದುವಾಗ ಅಲ್ಲಿನ ಕೆಸಿಡಿ ಮೈದಾನದಲ್ಲಿ ಫುಟ್ಬಾಲ್ ಆಡುವಾಗ ಆಕಸ್ಮಿಕವಾಗಿ ಬಿದ್ದೆ. ಬೆನ್ನಿಗೆ ಕಲ್ಲು ತಾಗಿ ಪೆಟ್ಟಾಯಿತು. ಆಸ್ಪತ್ರೆಗೆ ಹೋದಾಗ ಟ್ಯೂಮರ್ ಆಗಿದೆ ಎಂದು ತಿಳಿಯಿತು. ಶಸ್ತ್ರಚಿಕಿತ್ಸೆಗೆ ಹೋಗುವಾಗ ನಡೆದುಕೊಂಡು ಹೋದ ನಾನು ಹೊರಬರುವಾಗ ಬಾಡಿ ಪ್ಯಾರಲಿಸಿಸ್ ಆಗಿ ಹಾಸಿಗೆ ಹಿಡಿಯುವಂತಾಯಿತು. ವೈದ್ಯರು ಹೇಳುವ ಪ್ರಕಾರ ನಾನು ಮತ್ತೆ ಎದ್ದು ಓಡಾಡಲು ಸಾಧ್ಯವಿದೆ. ಅದಕ್ಕೆ ಅಗತ್ಯವಾದ ಹಣಕಾಸು ಬಲ ನನ್ನ ಬಳಿ ಸದ್ಯಕ್ಕಿಲ್ಲ.

◆ ನಿಮ್ಮ ಸ್ಥಿತಿಯಲ್ಲಿರುವ ಇತರರಿಗೆ ಏನು ಹೇಳಬಯಸುತ್ತೀರಿ?

ಯಾವುದೋ ಒಂದು ಕಾರಣಕ್ಕೆ ಆ ದೇವರು ಲೈಫ್‌ನಲ್ಲಿ ಕೊಟ್ಟಿದ್ದನ್ನು ಕಿತ್ತುಕೊಳ್ಳುತ್ತಾನೆ. ಆಗ ಭರವಸೆ ಕಳೆದುಕೊಳ್ಳಬಾರದು. 'ದೇವರು ನನಗ್ಯಾಕೆ ಹೀಗೆ ಮಾಡಿದ' ಅಂತ ಕೊರಗುವ ಬದಲು, ಯಾಕ್ ಹೀಗೆ ಮಾಡಿದ ಎಂಬುದರ ಕಾರಣ ಹುಡುಕಬೇಕು. ಸವಾಲುಗಳನ್ನು ಪಾಸಿಟಿವ್ ಆಗಿ ಸ್ವೀಕರಿಸಿ, ದೇವರು ಇನ್ನೂ ಏನೋ ಬೇರೆಯದ್ದನ್ನು ನನ್ನಿಂದ ಮಾಡಿಸಹೊರಟಿದ್ದಾನೆ ಅಂತ ಮುನ್ನುಗ್ಗಬೇಕು.

◆ ನಿಮ್ಮ ಕುಟುಂಬದ ಬಗ್ಗೆ ಹೇಳಿ.

ನನ್ನಪ್ಪ ನಮ್ಮನ್ನು ಕಬ್ಬು ಮಾರಿ ಸಾಕಿದ್ದಾರೆ. ಅಪ್ಪ–ಅಮ್ಮನ ಮುಗ್ಧ ಪ್ರೀತಿಗೆ ದೇವರು ಒಲಿದಿದ್ದಾನೆ. ಸದ್ಯಕ್ಕೆ ಸ್ವಲ್ಪ ಕಷ್ಟ ಇದೆ. ನನ್ನಮ್ಮ ಹೊಸ ಸೀರೆ ಕಂಡಿಲ್ಲ, ಬಂಗಾರ ಬೇಡಿಲ್ಲ. ಇರುವುದರಲ್ಲೇ ಕಷ್ಟಪಟ್ಟು ನಮ್ಮನ್ನು ಚೆನ್ನಾಗಿ ಸಾಕಿದ್ದಾರೆ. ನಾನು ಪಟ್ಟ ಕಷ್ಟಕ್ಕೆ ಸಾರ್ಥಕತೆ ಸಿಕ್ಕಿದೆ. ತಮ್ಮ ನಜೀರ್ ಸಿವಿಲ್ ಎಂಜಿನಿಯರ್, ಕೆಲಸದ ಹುಡುಕಾಟದಲ್ಲಿದ್ದಾನೆ. ಕೆಲಸ ಸಿಕ್ಕರೆ ನಮ್ಮ ಮನೆ ತುಂಬಾ ಚೆನ್ನಾಗಿರುತ್ತದೆ.

◆ ವೇದಿಕೆ ಮೇಲೆ ನೀವು ಹಾಡಿದ ಹಾಡುಗಳ ಪೈಕಿ ಯಾವುದಿಷ್ಟ?

'ಎಲೆ ಕೆಂಚಿ ತಾರೆ' ಅನ್ನೋ ಜಾನಪದ ಹಾಡು ತುಂಬಾ ಇಷ್ಟವಾಯಿತು. 18 ಎಪಿಸೋಡ್‌ಗಳಲ್ಲಿ 15 ಬಾರಿ ನಾನು ಗೋಲ್ಡನ್ ಬಜರ್ ಪಡೆದುಕೊಂಡಿದ್ದೆ. ಆದರೆ ಆ ಹಾಡಿಗೆ ಗೋಲ್ಡನ್ ಬಜರ್ ಸಿಕ್ಕಿರಲಿಲ್ಲ. ಆದರೂ ಬೇಜಾರಿಲ್ಲ, ಅದೇ ಹಾಡು ನನಗಿಷ್ಟ.

◆ ಮುಂದೇನು?

ಜೀವನದಲ್ಲಿ ನನಗೆ ಯಾವುದೇ ಪ್ಲಾನಿಂಗ್ ಇಲ್ಲ. ಇಲ್ಲಿಯವರೆಗೆ ನನ್ನನ್ನು ಕರೆತಂದವರು ಕರ್ನಾಟಕದ ಜನತೆ. ಮುಂದೆಯೂ ಅವರೇ ನಾನು ಸಾಗುವ ದಿಕ್ಕನ್ನು ತೋರಬೇಕಿದೆ. ಚಿತ್ರರಂಗವು ನನ್ನನ್ನು ಯಾವ ರೀತಿ ಬಳಸಿಕೊಳ್ಳುತ್ತದೋ ಆ ರೀತಿ ನಾನು ಸಾಗುವೆ. ಎಲ್ಲವೂ ಕರ್ನಾಟಕದ ಜನತೆ ಹಾಗೂ ಚಿತ್ರೋದ್ಯಮದ ಕೈಯಲ್ಲಿದೆ. ■